ಶ್ರೀ ಎಸ್. ಆರ್. ಬೊಮ್ಮಾಯಿ.—ಬೆಂಡಿಗೇರಿ ಪ್ರಕರಣದಲ್ಲಿ ಗಡಿಪಾರು ಮಾಡಿದಾಗ ಹೈಕೋರ್ಟ್‌ನಿಂದ ಸ್ಟೇ ಬಂತು. ನಾವು ಗಡಿಪಾರು ಮಾಡುತ್ತೇವೆ, ಅದಕ್ಕೆ ಸರ್ಕಾರ ಹಿಂದೆ ಮುಂದೆ ನೋಡುವುದಿಲ್ಲ, ಅದು ಕಾನೂನಿನ ಚೌಕಟ್ಟಿನೊಳಗೆ ಬರಬೇಕು, ಗೂಂಡಾ ಆಕ್ಟ್‌ನ ಚೌಕಟ್ಟಿನೊಳಗೆ ಬರಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರಿಗೆ ಭಯ ಬರುವುದಾದರೂ ಹೇಗೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಹೇಳಿದ ಸೂಚನೆಯನ್ನು ವಿಚಾರ ಮಾಡುತ್ತಿದ್ದೇನೆ. ಗೂಂಡಾ ಆಕ್ಟ್ ಪ್ರಕಾರ ಮಾಡುವುದಾದರೆ ಯಾವ ರೀತಿ ಮಾಡಬೇಕೆಂಬುದರ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ. ಇರತಕ್ಕ ಕಾನೂನನ್ನೆ ಬದಲಾವಣೆ ಮಾಡತಕ್ಕದ್ದು ಸರಿಯೆನ್ನುವ ಭಾವನೆ ಬಂದಿದೆ. ಇಂತಹ ಘಟನೆ ನಡೆದಾಗ ಯಾವುದೇ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಬಲವಾದ ಕಾನೂನು ಇರಬೇಕು, ಅಂತಹ ಆಲೋಚನೆಯನ್ನು ನಾವು ಮಾಡಬೇಕಾಗಿದೆ. ರಾಷ್ಟ್ರಮಟ್ಟದಲ್ಲಿ ಮಾಡಬೇಕಾಗುತ್ತದೆ. ನಾವು ಮಾಡಿದ ಎಷ್ಟೋ ಆಜ್ಞೆಗಳಿಗೆ ಉಚ್ಚನ್ಯಾಯಾಲಯ ಹಾಗೂ ಶ್ರೇಷ್ಠ ನ್ಯಾಯಾಲಯಗಳು ತಡೆಯಾಜ್ಞೆಯನ್ನು ಕೊಟ್ಟರೆ ಬಹಳ ಕಷ್ಟಕರವಾಗುತ್ತದೆ. ಕಾನೂನನ್ನೆ ಬದಲಾವಣೆ ಮಾಡಬೇಕಾಗುತ್ತದೆನ್ನುವುದು ನನ್ನ ಸೂಚನೆ.

ಶ್ರೀ ಎಂ. ಎಸ್. ಕೃಷ್ಣನ್.—ಗಡಿಪಾರು ಮಾಡುವುದಕ್ಕೆ ಆಲೋಚನೆ ಏನು ಬಂತು ? ಕಾನೂನುಗಳು ಇವೆ ಅವುಗಳನ್ನು ಜಾರಿ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾನೂನುಗಳಿವೆ ಅವು ಸಾಲದು.

ಶ್ರೀ ಎಂ. ಎಸ್. ಕೃಷ್ಣನ್.—ಗೂಂಡಾಗಿರಿ ಮಾಡಿದ್ದಾರೆಂದು ಗಡಿಪಾರು ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾನೂನು ಬದಲಾವಣೆ ಮಾಡತಕ್ಕ ವಿಚಾರ ಮಾಡ ಬೇಕಾಗುತ್ತದೆ. ಮನೆ ಕಟ್ಟತಕ್ಕ ಜಾಗದ ಬಗ್ಗೆ ಸ್ಥಳೀಯ ಶಾಸಕರ ಹಾಗೂ ಜನರ ಒಪ್ಪಿಗೆ ತೆಗೆದು ಕೊಂಡು ಮನೆಗಳನ್ನು ಕಟ್ಟುತ್ತೇವೆ.

(2) ಚಿಕ್ಕನಾಯಕನಹಳ್ಳಿ ಬಸ್ ನಿಲ್ದಾಣ ಮತ್ತು ಶೆಟ್ಟಿಕೆರೆ ಗೇಟಿನಲ್ಲಿ ಬೆಂಕಿ ಆಕಸ್ಮಿಕದಿಂದ ನಷ್ಟ ಉಂಟಾಗಿರುವ ಅಂಗಡಿ ಮಾಲೀಕರಿಗೆ ಪರಿಹಾರ ಕೊಡುವಲ್ಲಿ ವಿಳಂಬವಾಗಿರುವುದು

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ದಿನಾಂಕ ೪-೩-೮೯ ರಂದು ಚಿಕ್ಕನಾಯಕನಹಳ್ಳಿ ಬಸ್ ನಿಲ್ದಾಣ ಮತ್ತು ಶೆಟ್ಟಿಕೆರೆ ಗೇಟ್‌ನಲ್ಲಿ ಅಗ್ನಿ ಆಕಸ್ಮಿಕದಿಂದ ಸುಟ್ಟು ಹೋಗಿರುವ ಅಂಗಡಿಗಳ ಮಾಲೀಕರಿಗೆ ಪರಿಹಾರ ನೀಡುವಲ್ಲಿ ವಿಳಂಬವಾಗಿರುವ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ (ಕಂದಾಯ ಮಂತ್ರಿ).—ಮಾನ್ಯ ಅಧ್ಯಕ್ಷರೇ, ಶ್ರೀ ಬಿ. ಲಕ್ಕಪ್ಪನವರ ಗಮನ ಸೆಳೆಯಂಥ ಸೂಚನೆಗೆ ನನ್ನ ಹೇಳಿಕೆಯನ್ನು ಓದುತ್ತೇನೆ.

ದಿನಾಂಕ ೪-೩-೮೯ ರಂದು ರಾತ್ರಿ ವೇಳೆಯಲ್ಲಿ ಚಿಕ್ಕನಾಯಕನ ಹಳ್ಳಿ ಬಸ್ ಸ್ಟ್ಯಾಂಡ್ ಪಕ್ಕದ ೧೨ ಪೆಟ್ಟಿಗೆ ಅಂಗಡಿಗಳು ಮತ್ತು ಅಂದೇ ರಾತ್ರಿ ವೇಳೆ ಸಂತೆ ಮೈದಾನದಲ್ಲಿ ೧೮ ಪೆಟ್ಟಿಗೆ ಅಂಗಡಿಗಳು ಆಕಸ್ಮಿಕ ಬೆಂಕಿ ಅನಾಹುತಕ್ಕೆ ಈಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಅಗ್ನಿ ಆಕಸ್ಮಿಕದಲ್ಲಿ ನೊಂದ ಸಂತ್ರಸ್ಥರು ಅನುಭವಿಸಿದ ನಷ್ಟ ಕುರಿತು ಸಂಬಂಧಪಟ್ಟ ಕಂದಾಯ ಅಧಿಕಾರಿಗಳು ಸೂಕ್ತ ಪರಿಶೀಲನೆ ನಡೆಸುತ್ತಿದ್ದಾರೆಂದೂ ಸಹ ಸರ್ಕಾರಕ್ಕೆ ವರದಿ ಬಂದಿರುತ್ತದೆ.

ಪ್ರಸುತ್ತ ಹಣಕಾಸು ಸಾಲಿನಲ್ಲಿ ಅಗ್ನಿ ಆಕಸ್ಮಿಕದಲ್ಲಿ ನೊಂದ ಸಂತ್ರಸ್ಥರಿಗೆ ಪರಿಹಾರ ಒದಗಿಸಲು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಹಣ ಬಿಡುಗಡೆ ಮಾಡಲಾಗಿದ್ದಿತು. ಈ ರೀತಿ ಬಿಡುಗಡೆ ಆಗಿದ್ದ ಹಣ ಪೂರ್ಣ ಖರ್ಚಾಗಿರುವುದಾಗಿ ಜಿಲ್ಲಾಧಿಕಾರಿಗಳು ತಿಳಿಸುತ್ತಾ, ಹೆಚ್ಚುವರಿ ಹಣ ಬಿಡುಗಡೆ ಕೋರಿದ್ದರು. ಅದೇ ರೀತಿ ಕೋರಿಕೆ ಬಂದಿದ್ದ ಜಿಲ್ಲೆಗಳಿಗೆ ಸರ್ಕಾರವು ಹಣವನ್ನು ಬಿಡುಗಡೆ ಮಾಡಿದೆ. ತುಮಕೂರು ಜಿಲ್ಲೆಗೆ ೨.೦೦ ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದೆ.

ಅಗ್ನಿ ಆಕಸ್ಮಿಕಗಳಲ್ಲಿ ತೊಂದರೆಗೀಡಾದ ಸಂತ್ರಸ್ತರಿಗೆ ನಿಯಮಾವಳಿ ಪ್ರಕಾರ ಪರಿಹಾರ ನೀಡುವ ಕ್ರಮವನ್ನು ತ್ವರಿತವಾಗಿ ಕೈಗೊಳ್ಳಬೇಕಾಗಿ ಸಂಬಂಧಪಟ್ಟ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಸೂಕ್ತ ನಿರ್ದೇಶನವನ್ನು ಸಹ ನೀಡಿರುತ್ತದೆ.

ಶ್ರೀ ಬಿ. ಲಕ್ಕಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ಉತ್ತರವನ್ನು ನೋಡಿದರೆ ಬಹುಶ: ಈಗಾಗಲೇ ಈ ನೊಂದಂಥ ವ್ಯಕ್ತಿಗಳಿಗೆ ಪರಿಹಾರ ದೊರೆಯಬೇಕಿತ್ತು. ಆದರೆ ಇಲ್ಲಿಗೆ ೧೭ ದಿವಸಗಳು ಕಳೆದರೂ ಪರಿಹಾರ ಅವರಿಗೆ ಸೇರಿಲ್ಲ. ಯಾರಾದರೂ ಕಳ್ಳರು ಮನೆಗೆ ನುಗ್ಗಿದರೆ ಕೈಗೆ ಸಿಕ್ಕಿದ್ದನ್ನೂ ಮಾತ್ರ ತೆಗೆದುಕೊಂಡುಹೋಗುತ್ತಾರೆ. ಆದರೆ ಬೆಂಕಿ ಅನಾಹುತದಲ್ಲಿ ಎಲ್ಲವೂ ಬೆಂಕಿಯಲ್ಲಿ ಬೆಂದು ಹೋಗುತ್ತದೆ. ಇವರೆಲ್ಲ ಸಣ್ಣಸಣ್ಣ ಪೆಟ್ಟಿಗೆ ಅಂಗಡಿಯವರು. ೧೭ ದಿನಗಳು ಕಳೆದರೂ ಸಹ ಯಾವುದೇ ಪರಿಹಾರವನ್ನು ಅವರಿಗೆ ಕೊಟ್ಟಿಲ್ಲ. ತಹಸೀಲ್ದಾರರು, ಅಸಿಸ್ಟೆಂಟ್ ಕಮಿಷನರ್ ಮತ್ತು ಜಿಲ್ಲಾಧಿಕಾರಿಯವರನ್ನು ಶೀಘ್ರವಾಗಿ ಪರಿಹಾರ ಕೊಡಿ ಎಂದು ಕೇಳಿದಾಗ ತಮ್ಮ ಹತ್ತಿರ ದುಡ್ಡಿಲ್ಲವೆಂದು ತಹಸೀಲ್ದಾರರು ಹೇಳುತ್ತಾರೆ. ಅಸಿಸ್ಟೆಂಟ್ ಕಮಿಷನರ್ ಮತ್ತು ಜಿಲ್ಲಾಧಿಕಾರಿಯವರೂ ಸಹ ಅದೇ ಉತ್ತರ ಹೇಳುತ್ತಾರೆ. ಇದನ್ನು ಸರ್ಕಾರಕ್ಕೆ ಬರೆಯುತ್ತೇವೆ ಎಂದು ಅವರು ಹೇಳಿದ್ದಾರೆ. ಬೆಂಕಿ ಆಕಸ್ಮಿಕಕ್ಕೆ ಒಳಗಾದವರಿಗೆ ೨೪ ಗಂಟೆಗಳಲ್ಲಿ ಪರಿಹಾರ ಕೊಡಬೇಕೆಂದು ನಿಯಮ ಇದೆ. ಆದರೆ ೧೭ ದಿವಸಗಳಾದರೂ ಇದನ್ನು ಈಡೇರಿಸುವುದಕ್ಕೆ ಆಗಿಲ್ಲವೆಂದು ಕೇಳಿದರೆ.....

ಅಧ್ಯಕ್ಷರು.—ಏನು ಆಗಬೇಕೆಂದು ಹೇಳಿ,

ಶ್ರೀ ಬಿ. ಲಕ್ಕಪ್ಪ.—ಆದ್ದರಿಂದ ದಯವಾಡಿ ತಕ್ಷಣ ನೊಂದವರಿಗೆ ಪರಿಹಾರ ಕೊಡುವುದಕೆ ನಿಮ್ಮಲ್ಲಿ ಹಣ ಇದಯೇ ಎಂಬುದನ್ನು ತಿಳಿಸಿ. ಇಲ್ಲದೇ ಹೋದರೆ ನಿಮ್ಮ ವಿಜಾನೆಗೆ ಬೆಂಕಿಬಿದ್ದು ಹೋಗಿದೆಯೇ ಎಂಬುದನ್ನಾದರೂ ಹೇಳಿ ಮೂರು ಲಕ್ಷ ರೂಪಾಯಿ ನಷ್ಟಕ್ಕೆ.....

ಅಧ್ಯಕ್ಷರು.—ಆದಷ್ಟು ಬೇಗ ಕೊಡಿಸಿ ಎಂದು ಹೇಳಿ.

ಶ್ರೀ ಬಿ ಲಕ್ಕಪ್ಪ.—೨೪ ಗಂಟೆಯೊಳಗೆ ಪರಿಹಾರ ಕೊಡಬೇಕೆಂದು ಇದೆ. ಆದರೆ ಇದುವರೆಗೂ ಕೊಟ್ಟಿಲ್ಲ. ೧೭ ದಿವಸಗಳಾದರೂ ಕೂಡ ಒಂದು ಕಾಸನ್ನೂ ಕೊಟ್ಟಿಲ್ಲ. ಆ ಜನ ಇವತ್ತು ಬೀದಿಯಲ್ಲಿ ಇದ್ದಾರೆ. ಅವರಿಗೆ ಜೀವನ ಮಾಡುವುದು ಕಷ್ಟವಾಗಿದೆ. ಜಿಲ್ಲಾಧಿಕಾರಿಯವರನ್ನು ಕೇಳಿದರೆ, ತಹಸೀಲ್ದಾರರನ್ನು ಕೇಳಿದರೆ ಹಣ ಇಲ್ಲವೆಂದು ಹೇಳುತ್ತಾರೆ. ಆದ್ದರಿಂದ ತಕ್ಷಣಕ್ಕೆ ಪರಿಹಾರ ಕೊಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ? ಎರಡನೆಯದಾಗಿ, ಆಗಿರತಕ್ಕಂಥಾದ್ದು ನಷ್ಟ ಮೂರೂವರೆ ಲಕ್ಷ ರೂಪಾಯಿಗಳೆಂದು ಹೇಳಿದ್ದಾರೆ. ಆದ್ದರಿಂದ ದಯವಾಡಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಹಣಕೊಡಿಸಬೇಕು. ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಮ್‌ನಿಂದ ಸಾಲ ತೆಗೆದುಕೊಂಡು ಅಂಗಡಿಗಳನ್ನು ಇಟ್ಟಿದ್ದವರಿಗೆ ವಾಪಸ್ಸು ಹಣ ಕೊಡುವುದಕ್ಕೆ ಆಗುವುದಿಲ್ಲ. ಅಂಗಡಿಗಳು ಸುಟ್ಟುಹೋಗಿವೆ. ಆದ್ದರಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಹೆಚ್ಚಿಗೆ ಹಣ ಕೊಟ್ಟು, ಅದೇರೀತಿ ತಕ್ಷಣ ಅವರಿಗೆ ಪರಿಹಾರವನ್ನು ಕೊಡಬೇಕೆಂದು ಹೇಳುತ್ತೇನೆ. ಇನ್ನೊಂದು ವಿಷಯವೆಂದರೆ ತಿಪಟೂರು ಸಬ್‌ಡಿವಿಜನ್ ವ್ಯಾಪ್ತಿಗೆ ಮೂರು ತಾಲ್ಲೂಕುಗಳು ಬರುತ್ತವೆ. ಏನಾದರೂ ಅಗ್ನಿಆಕಸ್ಮಿಕಗಳು ಸಂಭವಿಸಿದರೆ ತುಮಕೂರಿನಿಂದ ಫೈರ್ ಬ್ರಿಗೇಡ್ ಬರಬೇಕಾಗುತ್ತದೆ. ಅಲ್ಲಿಂದ ಸಿಬ್ಬಂದಿಯವರು ಬಂದು ಬೆಂಕಿ ಆರಿಸಬೇಕು. ಅಷ್ಟು ಹೊತ್ತಿಗೆ ಬೆಂಕಿಬಿದ್ದು ಎಲ್ಲಾ ಸುಟ್ಟುಹೋಗಿರುತ್ತದೆ. ಇತ್ತೀಚೆಗೆ ತಿಪಟೂರಿನಲ್ಲಿ ೨೪ ಮನೆಗಳು ಬೆಂದು ಹೋಗಿವೆ. ಇದನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ, ಇದು ಆಗಿ ಮೂರು ತಿಂಗಳಾಯಿತು ಇದು ಅವರಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಫೈರ್‌ಬ್ರಿಗೇಡ್‌ನ್ನು ತಿಪಟೂರು ಸಬ್‌ಡಿವಿಜನ್‌ಗೆ ಕೊಟ್ಟರೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಂಭವಿಸತಕ್ಕಂಥ ಬೆಂಕಿ ಆಕಸ್ಮಿಕಗಳನ್ನು ಆದಷ್ಟುಬೇಗ ತಹಬಂದಿಗೆ ತಂದು ನಷ್ಟ ಸಂಭವಿಸುವುದನ್ನು ತಡೆಯಬಹುದಾಗಿದೆ. ಕಿಬ್ಬನಹಳ್ಳಿ ಕ್ರಾಸ್ ಏನಾಗಿದೆ ಎಂದರೆ ಚಿಕ್ಕನಾಯಕನಹಳ್ಳಿಗೆ ೧೨ ಕಿಲೋ ಮೀಟರ್ ದೂರದಲ್ಲಿದೆ. ತುರುವೇಕೆರೆ ಇಲ್ಲಿಂದ ೧೨ ಕಿಲೋಮೀಟರ್ ಇದೆ. ೧೫ ಕಿಲೋ ಮೀಟರ್ ತಿಪಟೂರು ಇದೆ. ಆದ್ದರಿಂದ ದಯವಾಡಿ ಪರಿಹಾರವನ್ನು ಕೂಡಲೇ ಕೊಡಬೇಕು. ಎರಡನೆಯದಾಗಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ.....

ಅಧ್ಯಕ್ಷರು.—ಎಷ್ಟು ಸಲ ಹೇಳಿದ್ದನ್ನೇ ಹೇಳುತ್ತೀರಿ ? ಪುನಃ ಪುನಃ ಅದನ್ನೇ ಹೇಳುತ್ತಿದ್ದೀರಿ ?

ಶ್ರೀ ಬಿ. ಲಕ್ಕಪ್ಪ.—ಫೈರ್‌ಬ್ರಿಗೇಡ್‌ನ್ನು ತಿಪಟೂರು ಸಬ್ ಡಿವಿಜನ್‌ಗೆ ಕೊಡತಕ್ಕಂಥ ಆಶ್ವಾಸನೆಯನ್ನು ದಯವಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್.—ಈಗಾಗಲೇ ಹೇಳಿದ್ದೇನೆ, ಹಣ ಬಿಡುಗಡೆ ಮಾಡಿದ್ದೇವೆ. ಅದು ಇಲ್ಲಿಯವರೆಗೂ ತಲುಪದೇ ಇದ್ದರೆ, ಇದರ ಬಗ್ಗೆ ನಮ್ಮ ಅಧಿಕಾರಿಗಳಿಗೆ ಹೇಳುತ್ತೇನೆ. ನಮ್ಮ ನಿಯಮಗಳು ಏನಿವೆ ಅದರ ಪ್ರಕಾರ, ೫೦೦ ರೂಪಾಯಿಗಳು ಲುಕ್ಸಾನು ಆಗಿದ್ದರೆ ಎಷ್ಟು ಕೊಡಬೇಕು, ೫೦೦ಕ್ಕಿಂತ ಸ್ವಲ್ಪ ಲುಕ್ಸಾನು ಆಗಿದ್ದರೆ ಎಷ್ಟು ಕೊಡಬೇಕು ಎಂಬುದನ್ನು ನಮ್ಮ ನಾರಮ್ಸ್ ಪ್ರಕಾರ, ಆಸ್ತಿ ಏನಿರುತ್ತದೆ ಅದರ ಆಧಾರದ ಮೇಲೆ ಏನು ಹಣ ಬಿಡುಗಡೆ ಮಾಡಬೇಕೋ ಅದನ್ನು ತಕ್ಷಣ ಕೊಡುವುದಕ್ಕೆ ಅಧಿಕಾರಿಗಳಿಗೆ ಹೇಳುತ್ತೇನೆ? ಇನ್ನು ಅಗ್ನಿಶಾಮಕ ಠಾಣೆ ಬಗ್ಗೆ ಹೇಳಿದ್ದಾರೆ. ಇದನ್ನು ವಿಚಾರ ಮಾಡುತ್ತೇನೆ. ತಿಪಟೂರಿನಲ್ಲಿ ಇದನ್ನು ಮೆಯಿನ್‌ಟೇನ್ ಮಾಡುವುದು ಹೇಗೆ, ಮುನಿಸಿಪಾಲಿಟಿಯವರು ಇದನ್ನು ಮೆಯಿನ್‌ಟೇನ್ ಮಾಡುತ್ತಾರೆಯೇ ಅಥವಾ ಮಂಡಲದವರು ಮೆಯಿನ್‌ಟೇನ್ ಮಾಡುತ್ತಾರೆಯೇ ಎಂಬುದನ್ನು ವಿಚಾರ ಮಾಡುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ತಹಶೀಲ್ದಾರರು ೫೦೦ ರೂಪಾಯಿಗಳನ್ನು ಕೊಡುತ್ತಾರೆ. ಮುನಿಸಿಪಾಲಿಟಿಯವರು ಹಣವಿದ್ದರೆ, ನೂರು ರೂಪಾಯಿ ಕೊಡುತ್ತಾರೆ, ಹೀಗೆ ಒಟ್ಟು ಅವರಿಗೆ ೧೫೦೦ ರೂಪಾಯಿಗಳವರೆಗೆ ಪರಿಹಾರ ಸಿಗುತ್ತದೆ. ಆದರೆ ಇಲ್ಲಿ ವಿಶೇಷ ಆದ್ಯತೆ ಮೇಲೆ ಪರಿಹಾರ ಕೊಡಬೇಕಾಗುತ್ತದೆ. ಇಷ್ಟು ನಷ್ಟ ಆಗಿದ್ದರೆ, ಇಷ್ಟು ಪರ್ಸೆಂಟ್ ಕೊಡುತ್ತೇವೆಂದು ಹೇಳಿದರೆ ಸಮಸ್ಯೆ ಬಗೆಹರಿಯುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ, ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಹಣ ಕೊಡಿಸುವ ವ್ಯವಸ್ಥೆ ಮಾಡಬೇಕು, ಏಕೆಂದರೆ ಇಲ್ಲಿ ಬಹಳ ಸೊಂದಿರುವವರು ಇದ್ದಾರೆ. ಅಲ್ಲಿ ಬಹಳ ಜನ ಸಾಲ ಸೋಲ ಮಾಡಿ ಅಂಗಡಿ ಇಟ್ಟಿದ್ದರು ಅದ್ದರಿಂದ ಕೊನೆಯ ಪಕ್ಷ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ತಲಾ ೨,೦೦೦ ರೂಪಾಯಿಗಳನ್ನಾದರೂ ಕೊಡಿಸತಕ್ಕಂಥ ಪ್ರಯತ್ನವನ್ನು ತಾವು ಮಾಡಬೇಕು.

ಶ್ರೀ ಜೆ.ಹೆಚ್ ಪಟೇಲ್.—ಏನಾದರೂ ಅನಾಹುತ ಆಗಿ ಸತ್ತಿದ್ದರೆ, ಪ್ರಾಣ ಹಾನಿ ಆಗಿದ್ದರೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಕೊಡಿಸಬಹುದು. ಆದರೆ, ಆಸ್ತಿ ಹಾನಿ ಬಗ್ಗೆ ಆ ರೀತಿ ಕೊಡುವುದಕ್ಕೆ ಬರುವುದಿಲ್ಲ.

(iii) ದಿನಾಂಕ ೨೮-೨-೮೯ರಂದು ಶಿಕಾರಿಪುರ ತಾಲ್ಲೂಕು ಅಂಬ್ಲಿಗೊಳ ಗ್ರಾಮದಲ್ಲಿ, ಟಾಕ್ಯನಾಯ್ಕ ಮತ್ತು ಮೂಕ ನಾಗೇಂದ್ರಪ್ಪ ಇವರುಗಳಿಗೆ ಅರಣ್ಯ ಸಂರಕ್ಷಣಾಧಿಕಾರಿಯವರು ಬೆತ್ತಲೆ ಮಾಡಿಸಿ ಮೆರವಣಿಗೆ ಮಾಡಿರುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ದಿನಾಂಕ ೨೮-೨-೮೯ರಂದು ಶಿಕಾರಿಪುರ ತಾಲ್ಲೂಕು, ಅಂಬ್ಲಿಗೊಳ ಗ್ರಾಮದಲ್ಲಿ ಇದೇ ತಾಲ್ಲೂಕಿನ ಸಾಲೂರುವಾಸಿಗಳಾದ ಟಾಕ್ಯನಾಯ್ಕ ಮತ್ತು ಮೂಕ ನಾಗೇಂದ್ರಪ್ಪ ಇವರುಗಳನ್ನು ಶಿಕಾರಿಪುರದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರು ಖುದ್ದಾಗಿ ಬೆತ್ತಲೆ ಮಾಡಿಸಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಕೃಷಿ ಮತ್ತು ಅರಣ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳ ಪರವಾಗಿ ಈ ಗಮನ ಸೆಳೆಯುವ ಸೂಚನೆಗೆ, ಈ ಕೆಳಕಂಡಂತೆ ಉತ್ತರವನ್ನು ಕೊಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಶ್ರೀ ಶಿವರಾಜ್ ಸಿಂಗ್, ಐ.ಎಫ್.ಎಸ್. ಇವರು ಈಗ ಪ್ರೊಬೇಷನರ್ ಇದ್ದು ಶಿಕಾರಿಪುರ ರೇಂಜ್‌ನಲ್ಲಿ ದಿನಾಂಕ ೧-೧೧-೮೯ರಿಂದ ಕೆಲಸ ನಿರ್ವಹಿಸುತ್ತಿದ್ದಾರೆ.

ದಿನಾಂಕ ೨೮-೨-೮೯ರಂದು ಗಾಮ ಹಳ್ಳಿಗೆ ಸೇರಿದ ಜನರು ಕರಡಿಬೆಟ್ಟ ಅರಣ್ಯದಲ್ಲಿ ಮರ ಸೌದೆಗಳನ್ನು ಕದ್ದು ತರಲು ಹೋಗಿದ್ದಾರೆಂದು ಸುದ್ದಿ ತಿಳಿದು ಅದನ್ನು ತಡೆಯಲು ಆ ಕಡೆ ಹೋದರು. ಹೋಗುತ್ತಿರುವಾಗ ದಾರಿಯಲ್ಲಿ ಗಾಡಿಯಲ್ಲಿ ಸೌದೆಯನ್ನು ಸಾಗಿಸುತ್ತಿರುವುದನ್ನು ಕಂಡು ಅದನ್ನು ನಿಲ್ಲಿಸಿದರು. ಗಾಡಿಯಲ್ಲಿದ್ದವರು ಅವರ ತಪ್ಪನ್ನು ಒಪ್ಪಿಕೊಂಡು ಈ ಪ್ರಕರಣವನ್ನು ಕಾಂಪೌಂಡ್ ಮಾಡಿಕೊಳ್ಳುತ್ತೇವೆಂದು ಒಪ್ಪಿದರು. ಮುಂದಿನ ಕ್ರಮಕ್ಕಾಗಿ ಅಂಬೆಗೋಳ ಅರಣ್ಯ ವಿಶ್ರಾಂತಿ ಗೃಹಕ್ಕೆ ಈ ಗಾಡಿಯನ್ನು ತೆಗೆದುಕೊಂಡು ಹೋಗುವಂತೆ ಆದೇಶ ನೀಡಿ. ಶ್ರೀ ಶಿವರಾಜ್ ಸಿಂಗ್‌ರವರು ಕಾಡಿನಲ್ಲಿ ಮುಂದೆ ಹೋದರು.